560

ಮೈಸೂರ ಗೆಜೆಟ್.

ನಂ. 33 ಸರ್ಕಾರದಿಂದ ಫಾಯಿಷ್ ಆದ್ದು. ಸನ 1890

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 23, ಸನ 1890.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪೆಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆರ್ಷ ಜಡ್ಜಿರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪ್ರೋಸ್ಪೆಕ್ಟಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮತ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷಣ್‌ಗಳು—1890ನೇ ಇಸವಿಯ Iನೇ ನಂಬರ್ ರೆಗ್ಯುಲೇಷನ್.

4ನೇ ಭಾಗ-ಸರ್ಕಾರೀ ಕಾಗದ ಪತ್ರಗಳು—1890ನೇ ಇಸವಿಯ Iನೇ ನಂಬರ್ ಮಸವಿದಾ ರೆಗ್ಯುಲೇಷನ್.

1ನೇ ಭಾಗ.

ಶ್ರೀಮತ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 25ನೇ ಜುಲೈ 1890.

ನಂ. 165.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನ ಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಪ್ತ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮಾನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರು ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹೀಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ 'ಹರಾಜು ಮುಕೂಫ್' ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರಪಿಛಿಕೇಟ್ ಆತನಿಗೆ ಕೊಡಲ್ಪಡುವದು. ತಪೀಲ್‌ನಲ್ಲಾಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟುಂತೆ ಎಣಿಸುವ ಜನಗಳು ಹರಾಜು ತಾರೀಖು ಆಗಾಯತು 30 ದಿನಗಳೊಳಗಾಗಿ ದಿವಾನ್‌ರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥ ಅಪ್ಪೀಲ್‌ನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರಿ.	ಅಂದಾಜು ಹುಟ್ಟುವಳಿ ಯಾಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿ ಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಮನುಕೂರು	ತಾಲೂಕೂರು	ಮನುಕೂರು	ವಡ್ಡರಹಳ್ಳಿ	ತತ್ಕಾಲದ ಹಿಡುವಳೀದಾರರು ನಂಜುಂಡಯ್ಯ ಇತರ ಮೂರು ಮಂದಿ	17 15 15$\frac{7}{8}$	150 0 0 ಲೋಕಲ್‌ಸೆಸ್	ಜೋಡಿ 101 0 0 11 0 0 112 0 0		1890ನೇ ಇಸವಿ ಸೆಪ್ಟಂಬರ್ 22ನೇ ಮಂಗಳವಾರದಲ್ಲಿ ತುಮಕೂರು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರು ರೂಬರೂ.
							1884—85ನೇ ಸಾಲಿಗೆ	54 15 0	
							1885—86ನೇ ಸಾಲಿಗೆ	33 0 8	
							1886—87ನೇ ಡಿಟೋ	53 6 10	
							1887—88ನೇ ಡಿಟೋ	28 0 2	
							1888—89ನೇ ಡಿಟೋ	28 0 2	
							1889—90ನೇ ಡಿಟೋ	112 0 9	
							ನೊಟೀಸ್ ಫಿ	1 0 0	
							ಟೋಟಲ್	310 7 7	
						ಮತ್ತು ಹರಾಜು ತಾರೀಖು		ವರಿಗೆ ಬಡ್ಡಿ	

ಪರಾ.—ಜೋಡಿದಾರರುಗಳಿಂದಲಾಗಲಿ, ಅಥವಾ ಬಾಧ್ಯತೆಯ ಮೂಲಕ ಇವರ ಪೂರ್ವೀಕರಿಂದಲಾಗಲಿ ಉಂಟು ಮಾಡಲ್ಪಟ್ಟ ಯಾವ ದೇಣಿಗಳಿಗಾಗಲಿ ಹಕ್ಕುಗಳಿಗಾಗಲಿ ಅಥವಾ ಮತ್ತ್ಯಾವ ಸಂಬಂಧಗಳಿಗಾಗಲಿ ಸದರೀ ಹರಾಜು ವಳಪಟ್ಟಿರುವದಿಲ್ಲವು.

ತಾರೀಖು 4ನೇ ಆಗಸ್ಟು 1890.

ನಂ. 169.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 4ನೇ ಸೆಕ್ಷನ್ ಅನುಸರಿಸಿ ಯಿದಕ್ಕೆ ಸಂಬಂಧಪಟ್ಟ ಜನಗಳ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಬೆಂಗಳೂರಿಂದ ಹಿಂದೂಪುರದವರೆಗೆ ರೈಲ್ ರಸ್ತೆಯನ್ನು ತಯಾರ್ಮಾಡುವ ವಿಚಾರ್ಯಾಗಿ ಜೇಕಾಗಿರುವ ತಮಾಂ ಜಮೀನುಗಳೂ ಸದರೀ ಮೇಲ್ಕಂಡ ಆಕ್ಟ್‌ನುಸರಿಸಿ ಆ ಬಗ್ಯಾಗಿ ಈಡು ಮೊಬಲಗು ಪಾವತೀ ಮಾಡಲ್ಪಟ್ಟು ತರುವಾಯ ತೆಗದುಕೊಳ್ಳಲ್ಪಡುವವು, ಮತ್ತು ಮೇಲ್ಕಂಡ ರೈಲ್ ರಸ್ತೆಯನ್ನು ಹಾಲಿ ತಯಾರ್ಮಾಡುತ್ತಿರುವವರು, ಅವರ ಕೆಲಸಗಳನ್ನೆ ನಡಿಸದಂತೆ ಯಾವ ವಿಧವಾಗಿಯೂ ಯಾರಿಂದಲೂ ಅಡ್ಡಿ ಪಡಿಸಲ್ಪಡಕೂಡದು.

ತಾರೀಖು 19ನೇ ಜುಲೈ 1890.

ನಂ. 156.—ಶ್ರೀಮನ್ಮಹಾರಾಜಾ ಸರ್ಕಾರದವರು ಇದರಿಂದ ಹುಕ್ಕುಂ ಮಾಡುವದೇನಂದರೆ, 1876ನೇ ಇಸವಿಯ ಫಾರೆಸ್ಟ್ ನಿಬಂಧನೆಗಳ 23ನೇ ಸೆಕ್ಷರ್ ಅನುಸರಿಸಿ ಮಾಡೋಣಾಗಿರುವ ಪುಪನಿಬಂಧನೆಗಳು ಚಿತ್ರದುರ್ಗ ಡಿಸ್ಟ್ರಿಕ್ಟ್ ಪೈಕಿ ಇದರಡಿ ನಮೂದಾಗುವ ಜಂಗಲ್‌ಗಳಿಗೆ ಲಗಾವಾಗಿರೆತಕ್ಕದ್ದು.

ಕಾಪಾಡಲ್ಪಟ್ಟಿರುವ ಜಂಗಲ್ ಪ್ರದೇಶದ ಹೆಸರು.	ಗ್ರಾಮ.	ವಿವರ.			ಕಾಪಾಡಲ್ಪಟ್ಟಿರುವ ಜಂಗಲ್ ಪ್ರದೇಶದ ಚಕ್ಕುಬಂದಿ.
		ಸರ್ವೇ ನಂಬರ್.	ವಿಸ್ತೀರ್ಣ. ಎಕರೆ.	ಗುಂಟೆ.	
ಹೊಳಲ್ಕೆರೆ ಗುಜ್ಜೀ	ಕುರುಬರ ಮರಡೀಕೆರೆ ..	28	754	14	ಪೂರ್ವಕ್ಕೆ—ಕುರುಬರೆ ಮರಡಿಕೆರ ಗಡಿ
	ಹಿಂಡಿಗನಾಡು ..	24	393	35	
	ಡಿಟೋ ..	25	697	32	ಪಶ್ಚಿಮಕ್ಕೆ—ರಾಜೆಹರವು ಬಸವನಹಳ್ಳಿ ಮ ಯೆಲಕನೂರಹಳ್ಳಿ ಗಡಿಗಳು
	ರಾಮಪುರ ..	9	190	0	
	ಯರೇಹಳ್ಳಿ .	24	1122	37	
	ದೊಡ್ಡಾಪುರ ..	9	66	34	ಉತ್ತರಕ್ಕೆ—ಹುಂಡಿಗನಾಡು ದೊಡ್ಡಾಪುರ ಯರೇಹಳ್ಳಿ ಸೊಂಡೆಕೊಳ ಬೆಳ್ಳಹಡ್ಲು ಮ ಅಬಂದನಹಳ್ಳಿ ಗಡಿಗಳು
	ಡಿಟೋ ..	11	232	33	
	ಡಿಟೋ ..	13	148	8	
	ಡಿಟೋ ..	15	150	8	
	ಡಿಟೋ ..	16	251	21	
	ಡಿಟೋ ..	17	507	0	ದಕ್ಷಿಣಕ್ಕೆ—ಚಿಕ್ಕಬಿದ್ದವ್ವನಹಳ್ಳಿ ತಿಕಲವಟ್ಟಿ ಮ ಜೋಲಹಾಲ್ ಗಡಿಗಳು
	ಡಿಟೋ ..	18	440	31	
	ಡಿಟೋ ..	19	166	17	
	ಡಿಟೋ ..	20	90	16	
	ಡಿಟೋ ..	23	81	15	
	ಕಿಲ್ಲೆಹಡ್ಲು ..	27	105	14	
	ಡಿಟೋ ..	28	88	22	
	ಡಿಟೋ ..	29	62	36	
	ಡಿಟೋ ..	30	312	11	
	ಡಿಟೋ ..	32	61	9	
	ಡಿಟೋ ..	35	591	10	
	ಡಿಟೋ ..	53	841	22	
	ಡಿಟೋ ..	54	678	26	
	ಡಿಟೋ ..	56	62	29	
	ಡಿಟೋ ..	64	63	11	
	ಡಿಟೋ ..	68	697	38	

ತಾರೀಖು 6ನೇ ಆಗಸ್ಟ್ 1890.

ನಂ. 176.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮೋಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ನಾರಿಗನಹಳ್ಳಿ ಕಾಯಂಗುತ್ತಾ ಗ್ರಾಮದಲ್ಲಿನ ಅರ್ಧಹಿಸ್ಸೆಯು, ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳ್ಗೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಪ್ತ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೇಕಡಾ 25 ರೊಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

3. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮಿನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

4. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುಖ್ತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುಖ್ತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಪಡಿಸತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

5. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜವಾಬಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯೂ ಇತರ ಖರ್ಚುಗಳು ದೇಬೀಲ್ ಕಂದಾಯದ ಬಾಕಿ ವೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮುಕ್ತಾಯ ಮಾಡಲ್ಪಡತಕ್ಕದ್ದು.

6. ಕ್ರಯದಾರನು ಕ್ರಯದ ವೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಸದರೀ ಹಿಸ್ಸೆಯು, ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ವೊಹರಿ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

7. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಜುಟ್ಟುವಳಿ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರ್ಕಾರದ ಕಂದಾಯದ ಬಾಕಿ.	ಹರಾಜ್ ತಾರೀಖು ಮೈರೆ.
ಕೋಲಾರ	ನೊಲೂರು	ನೊಲೂರು	ಕಾಯಂಗುತ್ತಾ ನಾರಿಗನಹಳ್ಳಿ ಗ್ರಾಮದಲ್ಲಿ ಅರ್ಧ ಹಿಸ್ಸೆ	ಬೀ[illegible]ಕೀರಾ	ಖಂ. ಕೂ. ಪ. 13 9 13¼	ರೂ. ಆ. ಪೈ. 55 6 8	ರೂ. ಆ. ಪೈ. ಕಾಯಂಗುತ್ತಾ 41 4 0 ಲೋಕಲ್‌ಸೆಸ್ 2 12 6 44 0 6	ರೂ ಆ. ಪೈ. 103 15 10 ಮತ್ತು ಹರಾಜ್ ತಾರೀಖು ವರಿವಿಗೆ ಬಡ್ಡಿ ಪಾವತಿ ಮಾಡಲ್ಪಡಬೇಕು	1890ನೇ ಇಸವಿ ಸೆಪ್ಟಂಬರ್ ತಾರೀಖು 29ರಲ್ಲು ತಾಲ್ಲೂಕು ಕಛೇರಿಯಲ್ಲಿ ಅಮಲ್‌ದಾರ್ರ ರೂಬರೂ,

ಷರಾ.—ಮಾಲೂರು ತಾಲ್ಲೂಕು ಚಿಕ್ಕಸುಬ್ಬೇನಹಳ್ಳಿ ಯಂಬ ಸರ್ಕಾರಿ ಗ್ರಾಮದಲ್ಲಿನ ಕೆಲವು ಜಮೀನ್ಗಳಿಗಾಗಿ ಸದರೀ ಕೋನೇರಾಜಾರ್ಯರಿಂದ ಬರಬೇಕಾದ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಮೈಸೂರು ಲ್ಯಾಂಡ್ ರೆವಿನ್ಯು ಕೋಡಿನ 161ನೇ ಸೆಕ್ಷನ್ ಅನುಸರಿಸಿ ಮೇಲ್ಕಂಡ ಗ್ರಾಮದಲ್ಲಿ ಸದರೀ ಕೋನೇರಾಚಾರ್ರಿಗೆ ಯಿರತಕ್ಕ ಅರ್ಧಹಿಸ್ಸೆಯ ಹಕ್ಕು ಬಾಧ್ಯತೆ ಮತ್ತು ಸಂಬಂಧವು ಹರಾಜ್ ಮಾಡಲ್ಪಡುವದು.

ತಾರೀಖು 6ನೇ ಆಗಸ್ಟ್ 1890ನೇ ಇಸವಿ.

ನಂ. 175.—ಇಂಡ್ಯ ಗವರಮೆಂಟ್ ಫುರ್ದ್ ಇಲಾಖಾ 1875ನೇ ಇಸವಿ ಡಿಸಂಬರ್ 31ನೇ ಮುಕ್ತಂ ಜುಡಿಷಲ್ 176ನೇ ನಂಬರ್ ಇಸ್ತಿಹಾರ್‌ನಾಮೆ ಮದಿವೆ ಆಗತಕ್ಕ ಉಭಯತ್ರರೂ ಬ್ರಿಟಿಷ್ ಕ್ರಿಚ್ಚಿಯರ್ ಪ್ರಜೆ ಅಲ್ಲದೆ ಪರಂತು ಯಿಬ್ಬರ ಪೈಕಿ ಒಬ್ಬರು ಮೈಸೂರು ನೇಟಿವ್ ಕ್ರಿಸ್ತ ಪ್ರಜೆಯಾಗಿ ಯಿದ್ದು ಅಂಥಾವರಿಗೆ ಮದಿವೆ ಆಗುವ ವಿಷಯದಲ್ಲಿ "1872ನೇ ಇಸವಿಯ ಇಂಡ್ಯನ್ ಕ್ರಿಸ್ಚ್ಚಿಯರ್ ಮ್ಯಾರಿಯೇಜ್ ಆಕ್ಟು" ಕೆಲವು ವಿನಾಯಿತಿಗಳೊಡನೆ ಮೈಸೂರು ಸಂಸ್ಥಾನದಲ್ಲಿ ಜಾರಿ ಆಗತಕ್ಕದ್ದೆಂದು ಉದಹರಿಸಲ್ಪಟ್ಟಿರುವದರಿಂದ

2. ಸದರೀ ಆಕ್ಟಿನ 7 ಮತ್ತು 9ನೇ ಸೆಕ್ಷನ್‌ಗಳಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನೆ ಚಲಾಯಿಸುವದರಲ್ಲಿ ಶ್ರೀಮಂ ಮಹಾರಾಜಾ ಸರ್ಕಾರದವರು ಆಜ್ಞಾಪಿಸುವದೇನಂದರೆ:—

(a) ವೆಸ್ಲಿಯರ್ ಮಿಷನ್‌ಗೆ ಕೀರಿದ ರೆವರೆಂಡ್ ಆರ್‌ನಾಲ್ಡ್ ಕ್ಯಾಳಿ ಮತ್ತು ರೆವರೆಂಡ್ ಸಾಮ್ಯುಯಲ್ ನಾಥನೀಲ್ ವ ರೆವರೆಂಡ್ ಜಾರ್ಮರ್ಕ್ ಯಿವರುಗಳು ಮೈಸೂರು ಸಂಸ್ಥಾನದೊಳಗೆ ಮ್ಯಾರಿಯೆಜ್ ಯಾನೆ ಮದಿವೆ ರಿಜಿಸ್ಟ್ರಾರಾಗಿಯಿರತಕ್ಕದ್ದು, ಮತ್ತು

(b) ಸದರೀ ರೆವರೆಂಡ್ ಆರ್‌ನಾಲ್ಡ್ ಕ್ಯಾಳಿ ವ ರೆವರೆಂಡ್ ಸಾಮ್ಯುಯಲ್ ನಾಥನೀಲ್ ಮತ್ತು ರೆವರೆಂಡ್ ಜಾರ್ಮರ್ಕ್ ಇವರುಗಳು, ನೇಟಿವ್ ಕ್ರಿಸ್ತರು ಅಂದರೆ ಮದಿವೆ ಆಗತಕ್ಕ ಉಭಯತ್ರರೂ ಹರಿ ಮೇಜಸ್ಟಿಯ ಕ್ರಿಸ್ತ ಪ್ರಜೆ ಅಲ್ಲದೆ ಪರಂತು ಇಬ್ಬರ ಪೈಕಿ ಒಬ್ಬರು ಮೈಸೂರು ಸಂಸ್ಥಾನದ ನೇಟಿವ್ ಕ್ರಿಸ್ತ ಪ್ರಜೆಯೊಗರುವ ಸಂದರ್ಭದಲ್ಲಿ ಮೈಸೂರು ಸಂಸ್ಥಾನ ದೊಳಗೆ ಮದಿವೆ ಆದ ಬಗ್ಗೆ ಸರ್ಟಿಫಿಕೇಟ್ ಕೊಡತಕ್ಕ ಬಗ್ಗೆ ಲೈಸೆನ್ಸ್ ಅಧಿಕಾರ ಕೊಡಲ್ಪಡತಕ್ಕದ್ದು.

ತಾರೀಖು 8ನೇ ಆಗಸ್ಟ್ 1890.

ನಂ. 178.—ದೊಡ್ಡಬಳ್ಳಾಪುರ ತಾಲ್ಲೂಕು ಅಮಲ್‌ದಾರ್ ಕುಪ್ಪಸ್ವಾಮಿನಾಯಿಡರವರಿಗೆ, 1889ನೇ ಇಸವಿ ಫಿಬ್ರವರೀ 5ನೇ ಮುಕ್ತಂ 7140—71—200ನೇ ನಂಬರ್‌ವುಳ್ಳ ಗವರ್ಮೆಂಟ್ ಪ್ರೊಸಿಡಿಂಗಸಿನ ನಿಯಮಗಳನುಸರಿಸಿ ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು 7 ದಿವಸಗಳ ಕಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 180.—1887ನೇ ಇಸವಿ 17ನೇ ಮಾರ್ಚ್ ಂ 86ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಪ್ರಕಟಿಸಲ್ಪಟ್ಟ ಸಂದರ್ಲ್ ಬಿಕರಿ ವಿಷಯಕವಾದ ರೂಲ್‌ಸಿನ 5ನೇ ಕಲಮಿನಲ್ಲಿ "ಬಂದು ಭಾಗದ ಮೊಬಲಗು ಪಾವತಿ" ಯಂಬದರ ತರುವಾಯ ಯಿದರಿಂ ಬರುವದನ್ನು ಕೇರಿಸತಕ್ಕದ್ದು:—

"ಖರೀದಿ ಮೊಬಲಗು ಪಾವತಿ ಮಾಡಲ್ಪಡದ ಸಂದರ್ಲ್ ಮರಗಳು ಮಾರಲ್ಪ ಹರಾಜ್ ಮಾಡಲ್ಪಡತಕ್ಕದ್ದು"

ಮತ್ತು 1887ನೇ ಇಸವಿ ಆಗಸ್ಟ್ 30ನೇ ಮಾರ್ಚ್ ಂ 99ನೇ ನಂಬರ್ ಇಸ್ತಿಹಾರ್‌ನಾಮೆ ಯೊಡನೆ ಪ್ರಕಟಿಸಲ್ಪಟ್ಟ ನಾಟಾ ವ ಬೊಂಬುಗಳ ಹರಾಜ್ ವಿಷಯಕವಾದ ರೂಲ್‌ಸಿನ 5ನೇ ಕಲಮಿನಲ್ಲಿ "ಗವರ್ಮೆಂಟಿಗೆ ದಂಡವಾಗಿ ಕೇರಿಸಿಕೊಳ್ಳಲ್ಪಡತಕ್ಕದ್ದು" ಯಂಬ ಮಾತುಗಳ ತರುವಾಯ ಯಿದರಿಂ ಬರುವದನ್ನೆ ಕೇರಿಸತಕ್ಕದ್ದು:—

"ಖರೀದಿ ಮೊಬಲಗು ಪಾವತಿ ಮಾಡಲ್ಪಡದ ನಾಟಾ ವ ಬೊಂಬುಗಳು ಮಾರಲ್ಪ ಹರಾಜ್ ಮಾಡಲ್ಪಡತಕ್ಕದ್ದು"

ನಂ. 186.—ಶ್ರೀಮನ್ಮಹಾರಾಜಾರಾಜಾ ಸಾಹೇಬ್ ಬಹದ್ದೂರವರ ಸರ್ಕಾರದವರು ಆಜ್ಞಾಪಿಸುವದೇನಂದರೆ, ಮೈಸೂರು ಸಂ ಸ್ಥಾನದ ಕೇಂದಿ ಕಂಟ್ರಾಕ್ಟುದಾರರು ಕೇಂದಿಯನ್ನು ಮಂದಿಗೆ ಬಿಕರಿ ಮಾಡುವಲ್ಲಿ ಬಂದು ಕೇರು ಕೇಂದಿ ಹಿಡಿಯತಕ್ಕಂಥಾ ಮೊಣ್ಣಿನ ಚಟ್ಟೆ ಅಥವಾ ಲೋಹದ ತಪ್ಪಲೆಯನ್ನು ಅಳದು ಕೊಡುವ ಬಗ್ಗೆ ಉಪಯೋಗಿಸತಕ್ಕದ್ದು; ಯಕ್‌ಸೈಸ್ ಆಕ್ಟು ಪ್ರಕಾರ ಬಂದು ಕೇರು ಯಂಭತ್ತು ತೊಲ ತೂಕವುಳ್ಳದಾಗಿ ಯಿರುತ್ತೆ.

ನಂ 2.—ಲೋಹದ ಪಾತ್ರೆಯಾಗಿದ್ದ ಪಕ್ಷದಲ್ಲಿ ಅಮಲ್‌ದಾರಿಂದ ಮುದ್ರಿಸಲ್ಪಡತಕ್ಕದ್ದು, ಮತ್ತು ಮಣ್ಣಿನ ಚಟ್ಟೆಯಾಗಿದ್ದಲ್ಲಿ ಅದರ ಕಂಠದ ಸುತ್ತಲೂ ವಂದು ಧಾರ ಕಟ್ಟಲ್ಪಟ್ಟು ಸದರೀ ಧಾರದ ಕೊನೆಗಳು ಗಂಟುಹಾಕಲ್ಪಟ್ಟು ಆಂಥಾ ಗಂಟಿನ ಮೇಲೆ ಅರಗು ಹಾಕಿ ಕಂಟ್ರಾಕ್ಟುದಾರ ಮುದ್ರೆ ಒತ್ತಲ್ಪಡತಕ್ಕದ್ದು. ಸದರೀ ಮುದ್ರೆ ಮತ್ತು ಧಾರಗಳು ನಷ್ಟವಾದ ಹಾಗೆಲ್ಲಾ ಅವುಗಳನ್ನ ಪುನಹಾ ಹೊಸದಾಗಿ ಹಾಕುವ ವಿಷಯದಲ್ಲಿ ಜಾಗರುಕರಾಗಿರತಕ್ಕದ್ದು.

ತಾರೀಖು 9ನೇ ಆಗಸ್ಟ್ 1890ನೇ ಇಸವಿ.

ನಂ. 177.—ಕೊಲಾರ್ ಪಬ್ಲಿಕ್ ವರ್ಕಸ್ ಸಬ್ ಡಿವಿಜನಿನ 3ನೇ ನಂಬರ್ ಕ್ಲರ್ಕ್ ವಿ. ಕೃಷ್ಣರಾಯರು "ಕೃಷ್ಣಾಚಾರ್" ಯೆಂಬ ಹೆಸರನ್ನು ವಹಿಸಿರುವದ್ದರಿಂದ ಈ ತಾರೀಖು ಲಾಗಾಯಿತು ಸದರೀ ಹೆಸರಿನಿಂದ ಬರಾವರ್ದಿನಲ್ಲಿ ದಾಖಲ್ಮಾಡತಕ್ಕದ್ದು.

ನಂ. 179.—ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಹೆಚ್. ನಂಜುಂಡರಾಜ್ ಅರಸಿನವರು, 1890ನೇ ಇಸವಿ ಜೂಲೈ 24ನೇ ಮುತ್ತುಮಿನ ಮಧ್ಯಾನ್ಹಾತ್ಪರ ತುಮಕೂರು ಡಿಸ್ಟ್ರಿಕ್ಟು ಟ್ರೆಜರಿ ಚಾರ್ಜನ್ನು ತುಮಕೂರು ಮುನಿಸಿಫಲ್ ಯೆಸ್. ವರದರಾಜಯ್ಯಂಗಾರ್ರಿಗೆ ವೊಪ್ಪಿಸಿರುತ್ತಾರೆ.

ನಂ. 181.—ತುಮಕೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ನಂಜುಂಡರಾಜ್ ಅರಸಿನವರಿಗೆ, 1889ನೇ ಯಿಸವಿ ಫಿಬ್ರವರೀ 5ನೇ ತಾರೀಖಿನ ಗವರ್ಮೆಂಟ್ 7140—71—200ನೇ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ 1890ನೇ ಇಸವಿ 28ನೇ ಜೂಲೈ ಲಾಗಾಯಿತು 5 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 182.—ಕಡೂರ್ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ನಾರಾಯಣಯ್ಯಂಗಾರ್ರಿಗೆ, 1890ನೇ ಇಸವಿ ಜೂಲೈ 18ನೇ ತಾರೀಖಿನ 118ನೇ ನಂಬರ್ ಇಸ್ತಿಹಾರಿನಲ್ಲಿ ಕೊಡಲ್ಪಟ್ಟಿದ 10 ದಿವಸಗಳ ಪ್ರಿವಿಲೀಜ್ ರಜಾ ಯಿನ್ನು 3 ದಿವಸಗಳು ಪರಿಯಂತ ಹೆಚಿಸಲ್ಪಟ್ಟಿರುತ್ತೆ.

ನಂ. 183.—ಬೆಂಗಳೂರು ಡಿಸ್ಟ್ರಿಕ್ಟು ಕಾರ್ಕಾನಹಳ್ಳಿ ತಾಲ್ಲೂಕು ಅಮಲ್‌ದಾರ್ ಕೃಷ್ಣರಾಯರಿಗೆ, ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಾಗಾಯತು 15 ದಿವಸಗಳು ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 12ನೇ ಆಗಸ್ಟ್ 1890ನೇ ಇಸವಿ.

ನಂ. 187.—ಕೆಲವು ಉದ್ಯೋಗಸ್ಥರನ್ನು 1878ನೇ ಇಸವಿ XIನೇ ನಂಬರ್ ಇಂಡಿಯರ್ ಆರಂಸ್ ಆಕ್ಟಿನ 13—14—15 ವ 16ನೇ ಸೆಕ್ಷನ್‌ಗಳಲ್ಲಿ ಅಡಗಿರತಕ್ಕ ತಮಾಂ ನಿರೋಧಗಳು ವ ನಿಯಮಗಳ ದೆಸೆಯಿಂದ ವಿನಾಯಿಸುವಂಥಾ 1890ನೇ ಇಸವಿ ಫಿಬ್ರವರೀ 4ನೇ ಮಾರ್ಚ್ ಂ 319ನೇ ನಂಬರ್‌ವುಳ್ಳ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿಯಾದ 1880ನೇ ಇಸವಿ ಜನವರೀ 7ನೇ ಮಾರ್ಚ್ ಂ ನಂಬರ್ 28ನೇ ಐ. ಪಿ. ಗುರ್ತಿನ ಫಾರ್ಮ್ ಇಲಾಖಾ ಇಸ್ತಿಹಾರ್ ನಾಮೆಯ 1 ಪ್ಯಾರಾವಿನ (II)ನೇ ಕಲಮಿಗೆ ಬದಲಾಗಿ ಇದರಿಂ ಕಂಡ ತಿದ್ದುಪಡಿಯಾದ ಕಲಮನ್ನು ದಾಖಲ್ಮಾಡಿಕೊಳ್ಳತಕ್ಕದ್ದು.

(II). ಸರಹದ್ದು ಭಾಗಗಳ ಅಥವಾ ಜಂಗಲ್ ಡಿಸ್ಟ್ರಿಕ್ಟುಗಳಲ್ಲಿನ ಆಬ್ಕಾರಿ ಆಫೀಸರ್ ದೇಖಿಲ್ ತಮಾಂ ರೆವಿನ್ಯೂ ಅಧಿಕಾರಿಗಳು, ಮತ್ತು ಮೈಸೂರು ಮರಹಮ್ಮತ್ ಇಲಾಖೆಯ ಇಂಜಿನೀರು ವ ಕೀಳ್ ದರ್ಜೆ ನೌಕರರು, ಕೆಲಸದ ಮೇಲಿರುವಲ್ಲಿ ಆಯುಧ ಪಾಣಿಗಳಾಗಿ ಹೋಗತಕ್ಕದ್ದೆಂಬದಾಗಿ ಆ ಯಾ ಇಲಾಖೆಯ ಆಫೀಸರರು ನಿಯಮಿಸುವ ಸಂಧರ್ಭಗಳಲ್ಲಿ.

ನಂ. 184.—ಬವರಿಂಗಪೇಟೆ ತಾಲ್ಲೂಕು ಅಮಲ್‌ದಾರ್ ವಿ. ರಾಜುವೊದೆಲಿಯಾರ್ರು 1890ನೇ ಇಸವಿ ಫಿಬ್ರವರೀ ಗುರ್ರೇ ಲಾಗಾಯತು ಭಂಗಾರದ ಗಣಿಗಳಿಗೆ ಸಂಬಂಧಪಟ್ಟ ಸ್ಪೆಷಲ್ ಡಿಟೆಕ್ಟಿವ್ ಡ್ಯೂಟಿಯ ಮೇಲೆ ಅಂಗಾಮಿ ತರ್ಕ ನಿಯಮಿಸಲ್ಪಟ್ಟಿರುತ್ತಾರೆ.

ಶಿರಸ್ತೇದಾರ್ ತಿರುಮಲಾಚಾರ್ರು 1890ನೇ ಇಸವಿ ಫಿಬ್ರವರೀ ಗುರ್ರೇಯಿಂದ ಅವೇ ತಿಂಗಳು 21ನೇ ತಾರೀಖು ವರಿವಿಗೆ ಬವರಿಂಗಪೇಟೆ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜನ್ನು ವಹಿಸಿದ್ದರು.

ಶ್ರೀನಿವಾಸಪುರದ ಡೆಪ್ಯೂಟಿ ಅಮಲ್ದಾರ್ ವಿ. ರ್ಯ. ಗೋಪಾಲರಾಯರು, ವಿ. ರಾಜುವೊದಲಿಯಾರು, ಸ್ಪೆಷಲ್ ಡ್ಯೂಟಿ ಮೇಲಿದ್ದಾಗ ಅಂದರೆ 1890ನೇ ಇಸವಿ ಫಿಬ್ರವರೀ 22ನೇ ಮಕ್ತುಮಿನ ಮಧ್ಯಾನ್ಹಾತ್ಪರದಾಗಲ್ಯ 1890ನೇ ಇಸವಿ ಜುಲೈ 8ನೇ ಮಕ್ತುಮಿನ 117ನೆ ನಂಬರ್ ಇಸ್ತಿಹಾರ್‌ನಲ್ಲಿ ಪ್ರಕಟಿಸಲ್ಪಟ್ಟ ರಜಾವನ್ನು ಅವರು ಉಪಯೋಗಿಸಿಕೊಳ್ಳುವ ತಾರೀಖು ವರಿಗೂ ಬವರಿಂಗ್‌ಪೇಟೆ ತಾಲ್ಲೂಕಿನ ಚಾಲ್ತೀ ಕೆಲಸಗಳ ಚಾರ್ಜನ್ನ ಹಂಗಾಮಿ ತರೀಕ್ ವಹಿಸಿದ್ದರು.

ಕೋಲಾರ ಡಿಸ್ಟ್ರಿಕ್ಟ್ ಆಫಿಸ್ ರವಿನ್ಯೂ ಹೆಡ್ ಮುನಷಿ ಮಾಧವರಾಯರು, ವಿ. ರ್ಯ. ಗೋಪಾಲರಾಯರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಶ್ರೀನಿವಾಸಪುರ ಸಬ್ ತಾಲ್ಲೂಕಿನ ಹಂಗಾಮಿ ಚಾರ್ಜನ್ನು ವಹಿಸಿರತಕ್ಕದ್ದು.

ನಂ. 185.—ಚಿತ್ರದುರ್ಗ ಡಿಸ್ಟ್ರಿಕ್ಟ್ ಹೊಳಲ್‌ಕೆರೆ ತಾಲ್ಲೂಕು ಹೊಸದುರ್ಗದ ರೇಂಜಿನ ಡೆಪ್ಯೂಟಿ ಅಮಲ್ದಾರ್ ಅಬ್ದುಲ್ ರಹಿಂ ಮೆಕರಿ ಯವರಿಗೆ 1889ನೇ ಇಸವಿ ಫಿಬ್ರವರೀ 5ನೇ ಮಕ್ತುಂ 7140—71—200ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್ ನಿಯಮಗಳನುಸರಿಸಿ 1890ನೇ ಇಸವಿ ಜುಲೈ 21ರ ಲಾಗಾಯತು 6 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 13ನೇ ಆಗಸ್ಟ್ 1890ನೇ ಇಸವಿ.

ನಂ. 188.—ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ.—ಚಿಕ್ಕಬಳ್ಳಾಪುರ ತಾಲ್ಲೂಕು ಜೇಡಿ ಪುಟ್ಟಗೋಸನಹಳ್ಳಿ ಗ್ರಾಮದ ಹೆಸರು ಮನ್ನಾರು ಪುರವೆಂಬದಾಗಿ ಬದಲಾಯಿಸಲ್ಪಟ್ಟಿರುತ್ತೆ.

ತಾರೀಖು 19ನೇ ಆಗಸ್ಟ್ 1890.

ನಂ. 120.—ಸರ್ಕಾರಿ ಕಾಗದ ಪತ್ರಗಳನ್ನು ಹಾಸಲಿಲ್ಲದೆ ಸರ್ಕಾರಿಯಾಗಿ ಸ್ವೀಮಾಡಿ ಕಳುಹಿಸತಕ್ಕ ವಿಷಯದಲ್ಲಿ ಪೋಸ್ಟ್ ಫೀಸ್ ರೂಲ್ಸ್‌ಗಳಿಗೆ ತಮ್ಮಾಂ ಸರ್ಕಾರ್ ನೌಕರರೂ ಮುಖ್ಯವಾಗಿ ಗಮನ ಕೊಡತಕ್ಕದ್ದು.

2. ಹಾಸಲಿಲ್ಲದೆ ಮೈಸೂರು ಸರ್ಕಾರಿಯಾಗಿ ಕಳುಹಿಸಲ್ಪಡುವ ಲಚೊಟೆ ಮತ್ತು ಬಸ್ತುಗಳಲ್ಲಿ ಫಸ್ಟ್ ಸರ್ಕಾರಿ ಕಾಗದ ಪತ್ರ ಮುಂತಾದವು ಮಾತ್ರವೇ ಆಡಗಿರತಕ್ಕದ್ದು. ಸರ್ಕಾರಿ ಅಥವಾ ಡೆಮಿ ಅಫಿಷಿಯಲ್ ಕಾಗದಪತ್ರಗಳನ್ನು ಕಳುಹಿಸುವವರ ಸಂಗಡ ಸ್ವಂತ ಕಾಗದಗಳು ಸದರೀ ಕಾಗದ ಪತ್ರಗಳೊಂದಿಗಾಗಲಿ ಅಥವಾ ಅವುಗಳ ಲಕೋಟೆಯಲ್ಲಿ ಯಾಗಲಿ ರವಾನಿಸಲ್ಪಡಕೂಡದು, ಡೆಪ್ಯೂಟಿ ಕಮ್ಮಿಷನರುಗಳು, ವ ಇಲಾಖೆಗಳ ಮುಖ್ಯ ಅಧಿಕಾರಿಗಳು, ಅವರವರ ತಾಬೇದಾರರು ಈ ನಿಬಂಧನೆಗಳಿಗೆ ಪೂರಾ ನಿಗಾ ಕೊಡತಕ್ಕದ್ದೆಂದು ಹುಕ್ಕುಂ ಮಾಡಬೇಕು.

ರೂಲ್

ಮೈಸೂರು ಗೆಜೆಟ್ಟಿಗೆ ಚಂದಾ ಹಣವನ್ನು ಪಾವತಿಮಾಡತಕ್ಕ ವಿಷಯದಲ್ಲಿ ಹಾಲಿ ಜಾರೀಯಿರುವ ನಡವಳಿತವನ್ನ ರದ್ದು ಮಾಡೀ ಇದರಡಿ ಬರುವ ನಿಬಂಧನೆಯನ್ನು ವಿಧಿಸೋಣಾಗಿರುತ್ತೆ.

ಯಿಚ್ಛೈವುಳ್ಳ ಚಂದಾದಾರರು, ಅವರ ಚಂದಾ ಮೊಬಲಗನ್ನು ಅತ್ಯಂತ ಸಮೀಪವಾದ ತಾಲ್ಲೂಕು ಖಜಾನೆಗೆ ಪಾವತಿ ಮಾಡ ಬೇಕು.

ಅಮಲ್ದಾರರು ಹಾಂಗೆ ಪಾವತಿ ಮಾಡೋಣಾದ ಮೊಬಲಗಿಗೆ, ಟ್ರೆಜರಿಗೆ ಬಂದ ಮೊಬಲಗಿಗಾಗಿ ಕೊಡುವ ವಾಡಿಕೆಯಾದ ಅಚ್ಚಿನ ನಮೂನೆಯಲ್ಲಿ ದ್ವಿಪ್ರತಿ ರಸೀತಿಯನ್ನ ತಯಾರ್ಮಾಡಿ ಕೊಡತಕ್ಕದ್ದು.

ಚಂದಾದಾರನು ಡ್ಯೂಪ್ಲಿಕೇಟ್ ರಸೀತಿಯನ್ನು ತನ್ನಲ್ಲಿ ಯಿಟ್ಟುಕೊಂಡು, ಒರಿಜಿನಲ್ ರಸೀತಿಯನ್ನು ತನ್ನ ದರಖಾಸ್ತಿನ ಸಂಗಡ ಮೈಸೂರು ಗೆಜೆಟ್ ಕಂಪೈಲರವರಿಗೆ ಕಳುಹಿಸತಕ್ಕದ್ದು.

ಕಂಪೈಲರವರು ಟ್ರೆಜರಿ ರಸೀತಿಯನ್ನು ಹಣಬಂದಂತೆ ಒಪ್ಪಿಕೊಳ್ಳುವರು

ಹುಕ್ಕುಂ ಬಮೋಜೀಬ್,
ಟಿ. ಆನಂದರಾವ್,
ಚೀಫ್ ಸೆಕ್ರಟರಿ.

ವಿದ್ಯಾಭ್ಯಾಸದ ಇಲಾಖೆ.

ಸ್ ೧೮೯೦ನೇ ಇಸವಿ ಜುಲೈ ತಾರೀಖು 26.

ಮೈಸೂರು ದೇಶೀಯ ಪರೀಕ್ಷೆ.

ಮೈಸೂರು ದೇಶೀಯ ಪರೀಕ್ಷಾ ಕಾಲಗಳ ಬದಲಾವಣೆಗಳು.

ಸ್ ೧೮೯೧ನೇ ಇಸವಿ ಫಿಬ್ರವರೀ ತಿಂಗಳಲ್ಲಿ ನಡೆಯುವ ಮೈಸೂರು ದೇಶೀ ಪರೀಕ್ಷೆಗಳು ಪೂರೈಸಿದನಂತರ, ಸದರೀ ಪರೀಕ್ಷೆಗಳ ನವಂಬರ್ ತಿಂಗಳಲ್ಲಿ ನಡೆಸಲ್ಪಡುತ್ತವೆ. ಮತ್ತು ನವಂಬರ್ 24ನೇ ತಾರೀಖಿನಲ್ಲಿ ಆಥವಾ 24ನೇ ತಾರೀಖು ಭಾನುವಾರ ವಾದಲ್ಲಿ 25ನೇ ತಾರೀಖಿನಲ್ಲಿ ಆರಂಭಿಸಲ್ಪಡುತ್ತವೆ.

ಹೆಚ್. ಜೆ. ಭಾಭಾ,
ಎಜ್ಯುಕೇಷನ್ ಸೆಕ್ರಟರಿ.